**ಒ.ಎಸ್.ನಂಬ್ರ: 128/2015 ಪಿ .ಡಬ್ಲ್ಯೂ : 1**

ದಿನಾಂಕ: 17-08-2023 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು

**ಪಾಟಿ ಸವಾಲು: ಶ್ರೀ ಎಂ.ಜೆ.ಎಸ್ ವಕೀಲರಿಂದ**

ಒಎಸ್ ನಂಬ್ರ 732/1990 ರ ದಾವಾ ಸ್ವತ್ತುಗಳ ಮಾಹಿತಿ ನನಗೆ ಇದೆ. ಸದರಿ ಸ್ವತ್ತುಗಳು ಮೂಲತಃ ಮದಗದ ಸುಬ್ಬರಾಯ ಪೈರವರಿಗೆ ಸೇರಿದ್ದು ಎಂದರೆ ಸರಿ . ಆತ ಯಾವುದೇ ದಾಖಲಾತಿಗಳನ್ನು ಮಾಡದೇ ಮವತಿಯಾಗಿದ್ದರು ಎಂದರೆ ಸರಿ . ಆತನ ವಾರಸುದಾರರು ಎಂದರೆ ಆತನ ಪತ್ನಿ ಸುಂದರಿ ಯಾನೆ ಲಕ್ಷ್ಮಿ , ಮಕ್ಕಳಾದ ಶಾಂತಾರಾಮ ಪೈ, ಅಚ್ಯುತ ಪೈ, ನಾಗೇಶ ಪೈ, ರಾಧಾ ಬ್ಯಾ , ವೆಂಕಟರಾಜ ಪೈ, ಯಶೋದ ಬ್ಯಾ, ರಾಮರಾಯ ಪೈ, ಜಯಂತ ಪೈ ಎಂದರೆ ಸರಿ . ಸುಬ್ಬರಾಯ ಪೈರವರು ಮವತಿಯಾದ ನಂತರ ಒಎಸ್ 732/1990 ರಂತೆ ಆತನ ವಾರಸುದಾರರು ಅವರಿಗೆ ಸಂಬಂಧಿಸಿದ ಸ್ವತ್ತುಗಳ ಹಕ್ಕುದಾರರಾದರು ಎಂದರೆ ಸರಿ . ಅವರ ಪೈಕಿ ಅಚ್ಯುತ ಪೈರವರು ಉಳಿದ ವಾರಸುದಾರರಿಗೆ ತಿಳಿಯದ ಹಾಗೆ ದಾಖಲಾತಿಗಳನ್ನು ತಯಾರಿಸಲು ಪ್ರಾರಂಭಿಸಿದ್ದರು ಎಂದರೆ ಸರಿ. ಆಗ ನಾಗೇಶ ಪೈರವರು ಉತ್ತರ ಕನ್ನಡ ಜಿಲ್ಲೆಯ ಬಂಟವಾಳದಲ್ಲಿ ವಾಸವಿದ್ದರು ಎಂದರೆ ಸರಿ . ಆದ್ದರಿಂದ ಒಸ್ 732/90 ನ್ನು ನಾಗೇಶ ಪೈರವರು ದಾಖಲಿಸಿ ತನ್ನ ಅಣ್ಣ ಮೋಸದಿಂದ ಸೃಷ್ಟಿಸಿದ ದಾಖಲೆಗಳನ್ನು ನಿರ್ಲಕ್ಷಿಸಿ ತನ್ನ ಪಾಲನ್ನು ಘೋಶಿಸುವಂತೆ ಕೋರಿದ್ದರು ಎಂದರೆ ಸರಿ . ಸದರಿ ದಾವೆಯಲ್ಲಿ ಅಚ್ಯುತ ಪೈ ಮತ್ತು ಈ ದಾವೆಯ 4 ನೇ ಪ್ರತಿವಾದಿ ಪಕ್ಷಗಾರರು ಎಂದರೆ ಸರಿ . ಸದರಿ ದಾವೆಯಲ್ಲಿ ಸುಬ್ಬರಾಯ ಪೈರವರ ಉಳಿದ ವಾರಸುದಾರರು ಪಕ್ಷಗಾರರಾಗಿದ್ದರು ಎಂದರೆ ಸರಿ . ಅಚ್ಯುತ ಪೈರವರು ತಯಾರಿಸಿದ್ದ ದಾಖಲಾತಿಗಳನ್ನು ಮನ್ನಾಗೊಳಿಸಿ ನ್ಯಾಯಾಲಯವು ಸುಬ್ಬರಾಯ ಪೈರವರ ವಾರಸುದಾರ ನಡುವೆ ಪಾಲಾಗಬೇಕೆಂದು ಘೋಶಿಸಿತ್ತು ಎಂದರೆ ಸರಿ . ಸದರಿ ಆದೇಶವು ದಿ:15-12-2000 ದಲ್ಲಿ ಆಗಿರುತ್ತದೆ ಎಂದರೆ ಸರಿ. ಸದರಿ ದಾವೆಯ 17 ಮತ್ತು 18 ನೇ ಪ್ರತಿವಾದಿಗಳು ಆರ್ ಎ 16/2001 ರಂತೆ ಸದರಿ ಆದೇಶದ ಮೇಲೆ ಮೇಲ್ಮನವಿ ಸಲ್ಲಿಸಿದ್ದರು ಎಂದರೆ ಸರಿ . ದಿ:21-06-2006 ರಂದು ಸದರಿ ಮೇಲ್ಮನವಿ ವಜಾಗೊಂಡಿತ್ತು ಎಂದರೆ ಸರಿ . ಆನಂತರ ಶಾಂತಾರಾಮ ಪೈರವರ ವಾರಸುದಾರರು ಎಫ್ ಡಿಪಿ 5/09 ರಂತೆ ತಮ್ಮ ಹಿಸೆಯನ್ನು ವಿಭಾಗಿಸುವಂತೆ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ. ಸದರಿ ಅರ್ಜಿಯಲ್ಲಿ ದಿ:27-01-2011 ರಂದು ಅಂತಿಮ ಆದೇಶವಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

ಈ ದಾವೆಯಲ್ಲಿ 3 ನೇ ಪ್ರತಿವಾದಿ ಪ್ರತಿವಾದ ಪತ್ರ ಸಲ್ಲಿಸಿದ್ದಾರೆಂದು ನನಗೆ ತಿಳಿದಿದೆ. ಎಫ್.ಡಿ.ಪಿ. 9/2011 ರಂತೆ ರಾಧಾ ಬ್ಯಾರವರ ವಾರಸುದಾರರು ಅಂತಿಮ ಡಿಕ್ರಿ ಮಾಡುವಂತೆ ಅರ್ಜಿ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಅಂತಿಮ ಆದೇಶದ ಬಗ್ಗೆ ನನಗೆ ಇಂದಿನವರೆಗೂ

ಮಾಹಿತಿ ಇಲ್ಲ. ದಿ:30-07-2013 ರಂದು ಸದರಿ ಅರ್ಜಿಯ ಮೇಲೆ ಅಂತಿಮ ಆದೇಶವಾಗಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಆದೇಶದ ಬಗ್ಗೆ ನನ್ನ ಮುಖ್ಯ ವಿಚಾರಣೆಯಲ್ಲಿ ಏನೂ ಹೇಳಿ ಬರೆಸಿಲ್ಲ. ಎಫ್.ಡಿ.ಪಿ. 9/2011 ರಲ್ಲಿ ಆದ ಆದೇಶದ ಬಗ್ಗೆ ಈ ದಾವೆಯಲ್ಲಿ ಯಾವುದೇ ನಿವೃತ್ತಿ ಕೋರಿಲ್ಲ. ನಿಪಿ-1 ರ ಬಗ್ಗೆ ಯಾವುದೇ ಮಾಹಿತಿ ಇಲ್ಲ. ಸದರಿ ದಾಖಲೆಯನ್ನು ಯಾವ ಉದ್ದೇಶಕ್ಕಾಗಿ ಹಾಜರುಪಡಿಸಿದ್ದೇನೆ ಎಂದು ಹೇಳಲು ಆಗುವುದಿಲ್ಲ. ಸದರಿ ಆದೇಶದ ಮೇರೆಗೆ ಈ ದಾವೆಯ 1 ರಿಂದ 3 ನೇ ಪ್ರತಿವಾದಿಗಳು ಒ ಎಸ್ 732/90 ರ ಆದೇಶದ ಪ್ರಕಾರ ತಮ್ಮ ಹಿಸೆ ಬಾಬ್ತು ಆಸ್ತಿಯನ್ನು ಪಡೆದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಎಫ್ ಡಿ ಪಿ 5/2009 ರಂತೆ ಶಾಂತಾರಾಮ ಪೈರವರ ವಾರಸುದಾರರು ತಮ್ಮ ಹಿಸೆ ಬಾಬ್ತು ಆಸ್ತಿಗಳನ್ನು ಪಡೆದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

3 ನೇ ಪ್ರತಿವಾದಿಯ ತಕರಾರಿನಲ್ಲಿ ಹೇಳಿರುವ ಸ್ವತ್ತುಗಳು ನಿಪಿ-1 ರ ಹಿಸೆಯ ಪ್ರಕಾರ 1 ರಿಂದ 3 ನೇ ಪ್ರತಿವಾದಿಗಳ ಸ್ವಾಧೀನಕ್ಕೆ ಬಂದಿದೆ ಎಂದರೆ ನನಗೆ ಗೊತ್ತಿಲ್ಲ. 1 ರಿಂದ 3 ನೇ ಪ್ರತಿವಾದಿಗಳ ಹೆಸರಿಗೆ ಪಹಣಿ ಬದಲಾವಣೆ ಮಾಡಲು ಪೌಲ್ ಅಬ್ರಹಾಂ ಮತ್ತು ಬಿಜು ಅಬ್ರಹಾಂ ಆಕ್ಷೇಪ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಅವರಿಬ್ಬರೂ ಅಚ್ಚುತ ಪೈರವರು ತಮಗೆ ಬರೆದುಕೊಟ್ಟ ದಾಖಲಾತಿಗಳ ಆಧಾರದ ಮೇಲೆ ಎಫ್ ಡಿ ಪಿ 20/2013 ರಂತೆ ಅರ್ಜಿ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಶಾಂತಾರಾಮ ಪೈ ಮತ್ತು ರಾಧಾ ಬ್ಯಾ ರವರನ್ನು ಹೊರತುಪಡಿಸಿ ಪೌಲ್ ಅಬ್ರಹಾಂ ಮತ್ತು ಬಿಜು ಅಬ್ರಹಾಂರವರು ಸುಬ್ಬರಾಯ ಪೈರವರ ಉಳಿದ ವಾರಸುದಾರರು ಆಸ್ತಿಗಳನ್ನು ತಮಗೆ ಬಿಟ್ಟುಕೊಟ್ಟಿದ್ದಾರೆಂದು ಅರ್ಜಿ ಸಲ್ಲಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಅವರಿಬ್ಬರ ನಿರ್ದೇಶನದ ಮೇರೆಗೆ ಅವರಿಗೆ ಸಹಾಯವಾಗುವಂತೆ ಈ ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಒಎಸ್ 732/1990 ರಲ್ಲಿ ಅಚ್ಚುತ ಪೈರವರು ಅನೇಕ ವ್ಯಕ್ತಿಗಳಿಗೆ ಮಾಡಿಕೊಟ್ಟಿರುವ ದಾಖಲಾತಿಗಳು ಕಾನೂನುಬಾಹಿರವೆಂದು ಆದೇಶಿಸಿದೆ ಎಂದರೆ ನನಗೆ ಗೊತ್ತಿಲ್ಲ. 1987 ರಲ್ಲಿ ದಾವಾ ಸ್ವತ್ತನ್ನು ನಾನು ಹಣ ಕೊಟ್ಟು ಖರೀದಿಸಿದ್ದು ಅದರ ಬಗ್ಗೆ ಪ್ರತಿವಾದಿಗಳು ನ್ಯಾಯಾಲಯದಿಂದ ಡಿಕ್ರಿ ಪಡೆದಿರುವ ಕಾರಣ ಈ ದಾವೆಯನ್ನು ಸಲ್ಲಿಸಿದ್ದೇನೆ. ಅದರಂತೆ ದಾವಾ ಸ್ವತ್ತುಗಳನ್ನು ನಾನು ಅಚ್ಚುತ ಪೈರವರಿಂದ ಖರೀದಿಸಿರುತ್ತೇನೆ. ನಿಪಿ-8 ನ್ನು ಮಾಡಿಸಿಕೊಳ್ಳುವ ಕಾಲಕ್ಕೆ ದಾವಾ ಸ್ವತ್ತುಗಳ ಸಂಬಂಧ ಯಾವುದೇ ದಾಖಲೆಗಳನ್ನು ಪರಿಶೀಲಿಸಿಲ್ಲ. ನಿಪಿ-8 ಆಗುವ ಕಾಲಕ್ಕೆ ನಾನು ಬೆಳ್ತಂಗಡಿ ತಾಲೂಕಿನ ಧರ್ಮಸ್ಥಳದಲ್ಲಿ ವಾಸಿಸುತಿದ್ದೆ. ನಾನು ಈಗಲೂ ಅಲ್ಲೇ ವಾಸವಿರುವುದು ಎಂದರೆ ಸರಿ . ಸಾಕ್ಷಿಯು ನನ್ನ ಹೆಂಡತಿ ಮತ್ತು ಮಕ್ಕಳು ಇಲ್ಲೇ ವಾಸವಿದ್ದಾರೆಂದು ನುಡಿಯುತ್ತಾರೆ.

ಅಚ್ಚುತ ಪೈ ನನ್ನ ಹೆಂಡತಿಯ ತಂದೆ ಎಂದರೆ ಸರಿ. ದಾವಾ 4 ನೇ ಪ್ರತಿವಾದಿ ನನ್ನ ಹೆಂಡತಿಯ ಅಣ್ಣ. ನಿಪಿ-8 ಆಗುವ ಕಾಲಕ್ಕೆ ಅಚ್ಚುತ ಪೈ ಅಥವಾ 4 ನೇ ಪ್ರತಿವಾದಿ ಯಾವುದೇ ವಿಷಯವನ್ನು ಮರೆಮಾಚಿಲ್ಲ. ನಿಪಿ-8 ಆಗುವ ಕಾಲಕ್ಕೆ ಸುಬ್ಬರಾಯ ಪೈರವರ 9 ವಾರಸುದಾರರಿಗೆ ಸದರಿ ಸ್ವತ್ತುಗಳ

ಮೇಲೆ ಹಕ್ಕು ಇತ್ತು ಎಂದರೆ ನನಗೆ ಗೊತ್ತಿಲ್ಲ. ಉಳಿದ ವಾರಸುದಾರರಿಗೆ ಮೋಸ ಮಾಡುವ ಉದ್ದೇಶದಿಂದ ನಿಪಿ-8 ನ್ನು ನನಗೆ ಮಾಡಿಕೊಟ್ಟಿದ್ದು ಎಂದರೆ ಗೊತ್ತಿಲ್ಲ. ನಾನು ಅವರಿಬ್ಬರೊಂದಿಗೆ ಶಾಮಿಲಾಗಿ ಸದರಿ ದಾಖಲೆಯನ್ನು ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಿಪಿ-8 ನ್ನು ನಾಮಕಾವಸ್ಥೆಗಾಗಿ ಮಾಡಿಕೊಟ್ಟಿದ್ದು ಯಾವುದೇ ಮೂಲ ಕ್ರಯ ಆಗಿರುವುದಿಲ್ಲ ಎಂದರೆ ಸರಿಯಲ್ಲ.

**ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯಾವಕಾಶ ಕಲ್ಪಿಸಲಾಯಿತು.**

ಓ.ಹೇ.ಕೇ.ಸ.ಇದೆ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಕುಂದಾಪುರ .**